ಓ.ಎಸ್.ನಂ.340/17
ಪಿ.ಡಬ್ಲ್ಯೂ-1

*ದಿಃ 05-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.*

**ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ನನ್ನ ವಕೀಲರಿಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

2. ನಾನು ನ್ಯಾಯಾಲಯಕ್ಕೆ ವಾದಿಯು ನನಗೆ ನೀಡಿದ ಜಿ ಪಿ ಎ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯ್ತು. ನನ್ನ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-2 ಎಂದು ಗುರುತಿಸಲಾಯ್ತು. ಸರ್ವೆ ನಂಃ 54, 48/1, 48/2 ಜಮೀನುಗಳ ಮೂರು ಪಹಣಿಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 5 ಎಂದು ಗುರುತಿಸಲಾಯ್ತು. ಅಸೆಸ್ ಮೆಂಟ್ 335 ರಿಂದ 338 ಸ್ವತ್ತಿನ 2017-18 ನೇ ಸಾಲಿನ ಅಸೆಸ್ ಮೆಂಟ್ ರಿಜಿಸ್ಟರಿನ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-6 ಎಂದು ಗುರುತಿಸಲಾಯ್ತು. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ನ್ಯಾಯಾಲಯಕ್ಕೆ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-

ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಿ ಮುಂದೂಡಲಾಯ್ತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.